**ಕರ್ನಾಟಕ ಲೋಕಾಯುಕ್ತ**

**ಸಂ.ಕಂಪ್ಲೇಂಟ್/ಉಪಲೋಕ್.ಬಿ.ಎಲ್.ಬಿ-475/2017/ಡಿಆರ್‌ಇ-5**

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:01-03-2018

**<u>ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ವರದಿ</u>**

**ವಿಷಯ :** (1) ಶ್ರೀ ಹೆಚ್.ರುದ್ರಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಹಂಪಸಾಗರ ಗ್ರಾಮ ಪಂಚಾಯತಿ, ಬಳ್ಳಾರಿ ಜಿಲ್ಲೆ (2) ವೀರಣ್ಣ ಕೆ. ಲೆಕ್ಕಾಧಿಕರಿಗಳು/ ಬಿಲ್ ಕಲೆಕ್ಟರ್, ಹಂಪಸಾಗರ ಗ್ರಾಮ ಪಂಚಾಯತಿ, ಬಳ್ಳಾರಿ ಜಿಲ್ಲೆ (3) ಶ್ರೀ ಸೀನಪ್ಪ, ಬಿಲ್ ಕಲೆಕ್ಟರ್, ಹಂಪಸಾಗರ ಗ್ರಾಮ ಪಂಚಾಯತಿ, ಬಳ್ಳಾರಿ ಜಿಲ್ಲೆ ಮತ್ತು (4) ಆಡಿಟರ್, ಹೆಚ್.ಬಿ.ಹಳ್ಳಿ ತಾಲ್ಲೂಕು ಪಂಚಾಯತಿ, ಬಳ್ಳಾರಿ ಜಿಲ್ಲೆ ಇವರುಗಳ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ.

****

ಈ ದೂರನ್ನು ಶ್ರೀ ಕೆ. ಅಮೀನಸಾಹೇಬು, ವಾಸ: ಹಂಪಸಾಗರ, ಹಗರಿಬೊಮ್ಮನಹಳ್ಳಿ ತಾಲ್ಲೂಕು ಬಳ್ಳಾರಿ ಜಿಲ್ಲೆ **(ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ)** ಇವರು (1) ಶ್ರೀ ಹೆಚ್.ರುದ್ರಪ್ಪ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಹಂಪಸಾಗರ ಗ್ರಾಮ ಪಂಚಾಯತಿ, ಬಳ್ಳಾರಿ ಜಿಲ್ಲೆ (2) ವೀರಣ್ಣ ಕೆ. ಲೆಕ್ಕಾಧಿಕಾರಿಗಳು/ ಬಿಲ್ ಕಲೆಕ್ಟರ್, ಹಂಪಸಾಗರ ಗ್ರಾಮ ಪಂಚಾಯತಿ, ಬಳ್ಳಾರಿ ಜಿಲ್ಲೆ (3) ಶ್ರೀ ಸೀನಪ್ಪ, ಬಿಲ್ ಕಲೆಕ್ಟರ್, ಹಂಪಸಾಗರ ಗ್ರಾಮ ಪಂಚಾಯತಿ, ಬಳ್ಳಾರಿ ಜಿಲ್ಲೆ ಮತ್ತು (4) ಆಡಿಟರ್, ಹೆಚ್.ಬಿ.ಹಳ್ಳಿ ತಾಲ್ಲೂಕು ಪಂಚಾಯತಿ, ಬಳ್ಳಾರಿ ಜಿಲ್ಲೆ **(ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ)** ಇವರ ವಿರುದ್ಧ ಸಲ್ಲಿಸಿದ್ದಾರೆ.

2. **<u>ದೂರಿನ ಸಂಕ್ಷಿಪ್ತ ವಿವರ:</u>**

ದೂರುದಾರರು ಯಾವುದೇ ಪ್ರತ್ಯೇಕವಾದ ದೂರನ್ನು ಸಲ್ಲಿಸದೇ ಫಾರ್ಮ-1 ರಲ್ಲಿ ಎದುರುದಾರರು ಕೋಟಿಗಟ್ಟಲೇ ಹಣವನ್ನು ನುಂಗಿದ್ದಾರೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಚಿದಾನಂದ ಚಾಲಕ ಇದ್ದರೂ ಸಹ ಅವನಿಗೆ ಮನೆ ಮಂಜೂರು ಆಗಿರುತ್ತದೆ. ಹೆಚ್.ಕೆ. ಪಾಟೀಲ್ ರವರ ಆಪ್ತ ಕಾರ್ಯದರ್ಶಿ ಇವರಿಗೆ ಎಲ್ಲಾ ಗೊತ್ತಿದೆ, ಆದರೆ ಸುಮ್ಮನೆ ಕುಳಿತ್ತಿದ್ದಾರೆ. ಶ್ರೀ ರಾಮಲಿಂಗಾರೆಡ್ಡಿ ಸಚಿವರಿಗೆ ತಿಳಿಸಿ ಇವರೆಲ್ಲರ ನೌಕರಿಯನ್ನು ತೆಗೆಯಿಸಬೇಕು ಅಂತ ಆಪಾದಿಸಿದ್ದಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) 1ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಚಿದಾನಂದ ಸರ್ಕಾರಿ ನೌಕರರ ಮನೆ ಮಂಜೂರಾತಿ ರದ್ದುಗೊಳಿಸಲಾಗಿದೆ. ಅವರು ಸ್ವಂತ ಖರ್ಚಿನಿಂದ ಮನೆಯನ್ನು ಕಟ್ಟಿಕೊಂಡಿದ್ದಾರೆ. ಯಾವುದೇ ಯೋಜನೆಯಲ್ಲಿ ಪಂಚಾಯತಿಗೆ 50-60 ಲಕ್ಷ ಹಣ ಮಂಜೂರು ಆಗಿಲ್ಲ, ಇದು ಸತ್ಯಕ್ಕೆ ದೂರವಾಗಿದೆ. ತಟ್ಟಿ ಮಾರುತಿ ಇವರ ಜಮೀನಿನ ವಿಷಯ ಪಂಚಾಯತಿಯ ವ್ಯಾಪ್ತಿಗೆ ಬರುವುದಿಲ್ಲ. ದೂರುದಾರರು ಸಲ್ಲಿಸಿರುವ ಮಾಹಿತಿ ಹಕ್ಕು ಅರ್ಜಿಗಳಿಗೆ ಮಾಹಿತಿಯನ್ನು ನೀಡಲಾಗಿದೆ. 3 ಜನ ಫಲಾನುಭವಿಗಳಿಗೆ ಮನೆ ಮಂಜೂರು ಆಗಿದ್ದು, ಅವರಿಗೆ ಹಣ ಪಾವತಿಯಾಗಿದೆ. ಆದ್ದರಿಂದ, ದೂರನ್ನು ಕೈಬಿಡಲು ಕೋರಿರುತ್ತಾರೆ.

(ಬಿ) 2ನೇ ಎದುರುದಾರರು ಜಿ.ಎಲ್.ಬಿ-3704/2015 ರಲ್ಲಿ ಸಲ್ಲಿಸಿರುವ ವರದಿಯ ಪ್ರತಿಯನ್ನು ಸಲ್ಲಿಸಿದ್ದಾರೆ ಹಾಗೂ ತಾನು ಕೇವಲ ಬಿಲ್ ಕಲೆಕ್ಟರ್ ಆಗಿರುವುದಾಗಿ ತಿಳಿಸಿದ್ದಾರೆ.

(ಸಿ) 3ನೇ ಎದುರುದಾರರು 2ನೇ ಎದುರುದಾರರ ಆಕ್ಷೇಪಣೆಗಳನ್ನೇ ಅಳವಡಿಸಿಕೊಂಡಿದ್ದಾರೆ.

(ಡಿ) 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ನವಂಬರ್-2014 ರಿಂದ ಡಿಸೆಂಬರ್-2014 ರ ವರೆಗೆ ಹಂಪಸಾಗರ ಗ್ರಾಮದ ಕ್ಷೇತ್ರ ಭೇಟಿಯನ್ನು ಮಾತ್ರ ಮಾಡಿದ್ದೇನೆ. ಉಳಿದ ಯಾವುದೇ ಕರ್ತವ್ಯಗಳನ್ನು ನಿರ್ವಹಿಸಿಲ್ಲ. ಆದ್ದರಿಂದ, ತಮ್ಮನ್ನು ಈ ಪ್ರಕರಣದಿಂದ ಕೈಬಿಡುವಂತೆ ಕೋರಿರುತ್ತಾರೆ.

4. ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿದೆ.

ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸದೆಯೇ ಅನುಪಾಲನಾ ವರದಿಯ ಪ್ರತಿಯಲ್ಲಿ ಅಲ್ಲಲ್ಲಿ ಪೆನ್ನಿನಿಂದ ಎದುರುದಾರರು ಕೋಟಿಗಟ್ಟಲೇ ಹಣವನ್ನು ನುಂಗಿದ್ದಾರೆ. ಮೊದಲು ಹಣ ತಿನ್ನುವುದು ಮತ್ತು ಮೇಲಾಧಿಕಾರಿಗಳಿಗೆ ಕೈಬಿಸಿ ಮಾಡುತ್ತಾರೆ ಅಂತ ಬರೆದಿದ್ದಾರೆ.

5. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ದೂರುದಾರರು ಈಗಾಗಲೇ 1 ಮತ್ತು 2ನೇ ಎದುರುದಾರರ ವಿರುದ್ಧ ದೂರು ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಜಿ.ಎಲ್.ಬಿ-3704/2015/ಡಿ.ಆರ್.ಇ-1 ರಂತೆ ದೂರನ್ನು ಸಲ್ಲಿಸಿದ್ದು, ಸದರಿ ಕಡತವು ಡಿ.ಆರ್.ಇ.-1 ರವರ

ಶಾಖೆಯಲ್ಲಿರುತ್ತದೆ. ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(3) ವರದಿಯನ್ನು ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಕಳುಹಿಸಲಾಗಿದೆ. ಮತ್ತು ಸರ್ಕಾರದ ಆದೇಶವು ಸ್ವೀಕೃತವಾಗಿದ್ದು, ಈ ಪ್ರಕರಣದ 1ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣಾಯು ನಡೆಯುತ್ತಿದೆ ಮತ್ತು 3ನೇ ಎದುರುದಾರರನ್ನು ಸೇವೆಯಿಂದ ವಜಾ ಮಾಡಲಾಗಿರುತ್ತದೆ.

6. ಆದ್ದರಿಂದ, ಈ ಪ್ರಕರಣದ 1, 3 ಮತ್ತು 4ನೇ ಎದುರುದಾರರ ವಿರುದ್ಧ ಪ್ರಕರಣವನ್ನು ಕೈಬಿಡಲಾಗಿದೆ.

7. ಈ ಪ್ರಕರಣದ 2ನೇ ಎದುರುದಾರರು ಬಿಲ್ ಕಲೆಕ್ಟರ್/ಲೆಕ್ಕಪತ್ರ ಅಧಿಕಾರಿ ಆಗಿದ್ದು ಮತ್ತು 4ನೇ ಎದುರುದಾರರು ಲೆಕ್ಕಪರಿಶೋಧಕರಾಗಿದ್ದಾರೆ. ಸದರಿ ಇಬ್ಬರೂ ಬಿಲ್ ಕಲೆಕ್ಟರ್‌ಗಳಾದ ಶ್ರೀ ಸೀನಪ್ಪ ಮತ್ತು ವೀರಣ್ಣ ಕೆ. ಇವರು ರಶೀಧಿ ಪುಸ್ತಕಗಳ ದಾಸ್ತಾನು ವಹಿಯನ್ನು ನಿರ್ವಹಿಸದೇ ಇರುವ ಬಗ್ಗೆ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆ ಮಾಡಿದ್ದು ರಶೀಧಿಗಳ ಕ್ರಮ ಸಂಖ್ಯೆಗಳು ಕ್ರಮಬದ್ಧವಾಗಿಲ್ಲ. ಕಾರ್ಯನಿರ್ವಾಹಕ ಅಧಿಕಾರಿಗಳಿಂದ ದೃಢೀಕರಣವಾಗಿಲ್ಲ. ಮನಬಂದಂತೆ ತೆರಿಗೆ ಹಣವನ್ನು ಬ್ಯಾಂಕಿಗೆ ಜಮಾ ಮಾಡಿರುವುದು ಹಾಗೂ ರೆಮಿಟನ್ಸ್ ಪುಸ್ತಕದಲ್ಲಿ ರಶೀದಿವಾರು ವಿವರಗಳನ್ನು ನಮೂದಿಸದೇ ಇರುವ ಬಗ್ಗೆ ವರದಿಯನ್ನು ಸಲ್ಲಿಸಿದ್ದಾರೆ. ಆದ್ದರಿಂದ, 4ನೇ ಎದುರುದಾರರ ವಿರುದ್ಧ ಯಾವುದೇ ಆಪಾದನೆಗಳು ಕಂಡುಬರುತ್ತಿಲ್ಲ. ಆದರೆ 2ನೇ ಎದುರುದಾರರಾದ ವೀರಣ್ಣ ಕೆ. ಹಂಪಸಾಗರ ಗ್ರಾಮ ಪಂಚಾಯತಿ ಬಿಲ್ ಕಲೆಕ್ಟರ್ ಆಗಿದ್ದರಿಂದ, ಆಡಿಟ್ ವರದಿಯಲ್ಲಿ ಶ್ರೀ ಕೆ.ವೀರಣ್ಣ ಇವರ ಮೇಲೆಯೂ ಸಹ ಗ್ರಾಮ ಪಂಚಾಯತಿಯ ತೆರಿಗೆ ವಿಚಾರಣೆಯ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಪಿ.ಡಿ.ಓ. ರವರು ನಿರ್ವಹಿಸುವಲ್ಲಿ ವಿಫಲರಾಗಿರುತ್ತಾರೆ ಅಂತ ಅಭಿಪ್ರಾಯಪಡಲಾಗಿರುವುದರಿಂದ, ಆಡಿಟ್ ವರದಿಯ ಪ್ರಕಾರ 2ನೇ ಎದುರುದಾರರ ಸಹ ಕರ್ತವ್ಯ ಲೋಪ ಎಸಗಿದ್ದಾರೆ ಎನ್ನಲು ಸಾಕಷ್ಟು ಆಧಾರಗಳಿವೆ.

8. ಆದುದರಿಂದ, 2ನೇ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(i)(ii) ಮತ್ತು (iii)ರಲ್ಲಿ ಹೇಳಿದಂತೆ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬರುವುದರಿಂದ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ 2ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳುವಂತೆ ಅಥವಾ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3)ರ ವರದಿಯಲ್ಲಿನ ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

1/3/18

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ